# ಪುರಸಭೆ,ದೇವನಹಳ್ಳಿ

## ಕಟ್ಟಡ ಪರವಾನಿಗೆ / BUILDING LICENSE

ಸಂಖ್ಯೆ: DHL-BL-126-2018-19 ದಿನಾಂಕ: 08-02-2019

ಅನುಸೂಚಿ IV
(ಉಪವಿಧಿ ಸಂಖ್ಯೆ 10.2)

ಅರ್ಜಿ ಸಂಖ್ಯೆ. DHL-BL-126-2018-19 , ದಿನಾಂಕ: 01-01-2019 ರಂದು ನೀಡಿದ ಅರ್ಜಿಯನ್ನು ಪರಿಶೀಲಿಸಲಾಗಿ, ಇದಕ್ಕೆ ಲಗತ್ತಿಸಲಾಗಿರುವ ನಕ್ಷೆಯನ್ನು ಅನುಸರಿಸಿ, ವಾರ್ಡ್ ಸಂಖ್ಯೆ. 9ರಲ್ಲಿರುವ ಶ್ರೀಮತಿ/ಶ್ರೀ.ಶ್ರೀ ಜೆ ಚಂಗಮನಾಯ್ಡು ಬಿನ್ ಲೇಟ್ ಜೆ ರಾಮಾನಾಯ್ಡು ಮಾಲೀಕತ್ವದ ಸ್ವತ್ತಿನ ಅಸೆಸ್ಮೆಂಟ್ ಖಾತೆ ಸಂಖ್ಯೆ. 195/59/60/5, ನಿವೇಶನ ಸಂಖ್ಯೆ. 5, ಆಸ್ತಿ ಗುರುತಿನ ಸಂಖ್ಯೆ. ಯುಳ್ಳ, ವಾರ್ಡ್ ನಂ.9 ದೇವನಹಳ್ಳಿ ಟೌನ್ ವಿಳಾಸದಲ್ಲಿರುವ ಸ್ವತ್ತಿನಲ್ಲಿ ಈ ಕೆಳಗೆ ಕಾಣಿಸಿದ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ಮಂಜೂರು ಮಾಡಲಾಗಿದೆ.

**ಪರವಾನಿಗೆ ಶುಲ್ಕ ರೂ. 2440942 ರಶೀದಿ ನಂ. 6364DHLOC01012019 ದಿನಾಂಕ: 08-02-2019**

**-: ಷರತ್ತುಗಳು :-**

**1.ಮಂಜೂರಾದ ಪರವಾನಿಗೆ ವಿವರಗಳು :**

ಕಟ್ಟಡವನ್ನು ಜಾಗದ ಎಡ ಭಾಗದಲ್ಲಿ 3.5 ಮೀ., ಬಲ ಭಾಗದಲ್ಲಿ 3.5 ಮೀ., ಹಿಂಭಾಗದಲ್ಲಿ 3.5 ಮೀ., ಮುಂಭಾಗದಲ್ಲಿ 3.5 ಮೀ. ಜಾಗವನ್ನು ಬಿಟ್ಟು ಕಟ್ಟಿಕೊಳ್ಳಬೇಕು.

ನಿವೇಶನದ ವಿಸ್ತೀರ್ಣ : 9540.22 ಚ.ಮೀ., ಎಫ್.ಎ.ಆರ್ : 9.45

ಚೆಕ್ಕುಬಂದಿ :- ಪೂರ್ವಕ್ಕೆ : ಖಾಸಗಿ ಜಮೀನು ಪಶ್ಚಿಮಕ್ಕೆ : ಖಾಸಗಿ ಜಮೀನು ಉತ್ತರಕ್ಕೆ : ಎನ್ ಎಚ್ 207 ದಕ್ಷಿಣಕ್ಕೆ : ಖಾಸಗಿ ಜಮೀನು

| ಮಹಡಿಯ ಸಂಖ್ಯೆ /Floor Number ** | ಮಹಡಿಯ ಉಪಯೋಗ /Floor Usage | ವಿಸ್ತೀರ್ಣ(ಚದರ ಮೀಟರ್ ಗಳಲ್ಲಿ) /BuiltUp Area(in Sq.m) |
|---|---|---|
| -1 | ವಸತಿ | 6181.4 |
| 0 | ವಸತಿ | 2967.16 |
| 1 | ವಸತಿ | 3081.67 |
| 2 | ವಸತಿ | 1955.14 |

(** : -2 = 2ನೇ ನೆಲಮಾಳಿಗೆ (Cellar), -1 = 1ನೇ ನೆಲಮಾಳಿಗೆ, 0 = ನೆಲ ಮಹಡಿ /GF, 1 = 1ನೇ ಮಹಡಿ/FF, 2 = 2ನೇ ಮಹಡಿ/SF..)

2. ಮಂಜೂರಾದ ನಕಾಶೆಯಂತೆ ಕಟ್ಟಡವನ್ನು ಕಟ್ಟತಕ್ಕದ್ದು.

3. ಮಂಜೂರಾದ ನಕಾಶೆಗೆ ಹೊರತಾಗಿ ಬೇರೆ ಯಾವುದೇ ಅನಧಿಕೃತ ಕಟ್ಟಡ ಕೆಲಸವನ್ನು ಮಾಡತಕ್ಕದ್ದಲ್ಲ.

4. ಕಟ್ಟಡದ ಕಾಮಗಾರಿಗಳು ಪರವಾನಿಗೆ ಅವಧಿಯೊಳಗೆ ಪೂರ್ತಿಯಾಗದಿದ್ದಲ್ಲಿ, ಬೈಲಾ 13-1 ರಂತೆ ಈ ಕಛೇರಿಗೆ ಸೂಕ್ತ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿ ಪರವಾನಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು.

5. ಕಟ್ಟಡದ ಕೆಲಸ ಪೂರ್ತಿಯಾದ ಕೂಡಲೇ ಅದರಲ್ಲಿ ವಾಸಿಸುವ/ಕಟ್ಟಡವನ್ನು ಉಪಯೋಗಿಸುವ ಮುಂಚಿತವಾಗಿ1964ನೇ ಮುನಿಸಿಪಾಲಿಟಿಗಳ ಅಧಿನಿಯಮದ ಸೆಕ್ಷನ್ 190ಪ್ರಕಾರ ಕಾಮಗಾರಿ ಪೂರ್ಣಗೊಂಡ ಬಗ್ಗೆ ಈ ಕಛೇರಿಗೆ ಅರ್ಜಿ ಸಲ್ಲಿಸಿ ವಾಸ್ತವ್ಯ ಉಪಯೋಗದ ಬಗ್ಗೆ ದೃಢೀಕರಣ ಪತ್ರ ಪಡೆದುಕೊಳ್ಳತಕ್ಕದ್ದು.

6. ಆರ್.ಸಿ.ಸಿ, ಹೆಂಚು ಮಾಡಿನಿಂದ ಮಳೆ ನೀರು ಭೂಮಿಗೆ ಹರಿದು ಹೋಗಲು ಯೋಗ್ಯ ರೀತಿಯಲ್ಲಿ ನಳಿಗೆ (ಪೈಪು) ಜೋಡಣೆ ಮಾಡತಕ್ಕದ್ದು.

7. ಸ್ಥಳ ತನಿಖೆ ವೇಳೆ ನಿವೇಶನದ ಗಡಿ ಅಳತೆಯಲ್ಲಿ ಕಂಡು ಬಂದಿರುವ ವ್ಯತ್ಯಾಸಗಳನ್ನು ಸ್ಥಳ ನಕಾಶೆಯಲ್ಲಿ ಮಾಡಿದ ಎಲ್ಲಾ ತಿದ್ದುಪಡಿಗಳನ್ನು ಪಾಲಿಸಲು ಪರವಾನಿಗೆದಾರರು ಬದ್ಧರಿರತಕ್ಕದ್ದು.

8. ಸ್ಥಳೀಯ ಸಂಸ್ಥೆಯ ರಸ್ತೆ ಬದಿಗಳಲ್ಲಿ ಪ್ರಸ್ತಾಪಿತ ಕಟ್ಟಡ ನಿರ್ಮಾಣದ ಬಗ್ಗೆ ಸಾಮಾಗ್ರಿ ಇತ್ಯಾದಿ ದಾಸ್ತಾನು ಮಾಡತಕ್ಕದ್ದಲ್ಲ.

9.ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಸೆಕ್ಷನ್ 187(6) ರಂತೆ ಪರವಾನಿಗೆ ಪಡೆದ ಅವಧಿಯೊಳಗೆ ಕಟ್ಟಡ ಕಾಮಗಾರಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಹೊಸ ಪರವಾನಿಗೆ ಪಡೆಯತಕ್ಕದ್ದು.

10. ಯೋಜಿತ ಕಟ್ಟಡದ ತಳಪಾಯ ಸೂಪರ್ ಸ್ಟ್ರಕ್ಚರ್ ಮತ್ತು ಉಳಿದ ಕಾಮಗಾರಿಗಳ ಪ್ರತಿ ಹಂತದಲ್ಲಿ ಈ ಕಛೇರಿಗೆ ಮುಂಚಿತವಾಗಿ ಲಿಖಿತವಾಗಿ ತಿಳಿಸಿ, ಅ) ಕಟ್ಟಡದ ತಳಪಾಯದ ಅಗೆತ ಪೂರ್ಣಗೊಂಡ ನಂತರ

ಆ) ಕಟ್ಟಡದ ಬೇಸ್ಮೆಂಟ್ ಹಂತ ಪೂರ್ಣಗೊಂಡ ನಂತರ ಇ) ಭೂಮಟ್ಟದಿಂದ ಮೇಲಿನ ಕಟ್ಟಡದ ಭಾಗ ಪೂರ್ಣಗೊಂಡ ನಂತರ ಹಾಗೂ

ಈ) ಮುಕ್ತಾಯ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ ನಿರ್ಮಾಣ ಕಾರ್ಯವು ಕಾನೂನು ಮತ್ತು ಬೈಲಾಗಳಿಗೆ ವ್ಯತಿರಿಕ್ತವಾಗಿರುವುದಿಲ್ಲವೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು ಖಚಿತ ಪಡಿಸಿದ ನಂತರ ಕಾಮಗಾರಿಯನ್ನು ಮುಂದುವರಿಸತಕ್ಕದ್ದು ಹಾಗೂ ಕಟ್ಟಡ ಮಾಲೀಕರು ಮತ್ತು ಕಟ್ಟಡ ನಿರ್ಮಾಣ ಇಂಜಿನಿಯರ್ ರವರು ಈ ಕಛೇರಿಗೆ ನಿರ್ಮಾಣವು ಪರವಾನಿಗೆ ರೀತ್ಯಾ ಇರುವುದಾಗಿ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

11. ನಿವೇಶನವನ್ನು ಸರ್ವೇ ಇಲಾಖೆಯಿಂದ ಅಳತೆ ಮಾಡಿ ಗಡಿ ಗುರುತಿಸಿಕೊಂಡು ನಂತರ ಮಂಜೂರಾದ ನಕಾಶೆಯಂತೆ ಯೋಜಿತ ಕಟ್ಟಡ ಕಟ್ಟತಕ್ಕದ್ದು.

12. ಸಾರ್ವಜನಿಕ ದಾರಿ ಹಾಗೂ ಮಳೆ ನೀರು ಹರಿಯುವ ದಾರಿಗೆ ಅಡ್ಡಿ ಉಂಟು ಮಾಡತಕ್ಕದ್ದಲ್ಲ.

13. ಕಟ್ಟಡದಲ್ಲಿ ಕಡ್ಡಾಯವಾಗಿ ಮಳೆ ನೀರು ಕೊಯ್ಲಿನ ವಿಧಾನವನ್ನು ಅಳವಡಿಸತಕ್ಕದ್ದು.

14. ಕಟ್ಟಡದ ನಿರ್ಮಾಣದ ಸ್ಥಳದಲ್ಲಿ ಪರಿಸರ ಮಾಲಿನ್ಯ ಉಂಟಾದಲ್ಲಿ ಪರವಾನಿಗೆದಾರರೇ ಜವಾಬ್ದಾರರು.

15. ಕಟ್ಟಡ ಕಾಮಗಾರಿಗೆ ಬಾಲ ಕಾರ್ಮಿಕರನ್ನು ನೇಮಿಸತಕ್ಕದ್ದಲ್ಲ.

16. ಕಟ್ಟಡದ ತಳಪಾಯ ಭೂಕಂಪನವನ್ನು ತಡೆಗಟ್ಟುವ ರೀತಿಯಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಮತ್ತು IS 93-2000 ರನ್ವಯ ನಿರ್ಮಿಸತಕ್ಕದ್ದು

17. ಕಟ್ಟಡ ನಿರ್ಮಾಣ ಹಂತದಲ್ಲಿ ಪಕ್ಕದ ನಿವೇಶನದ ಆಸ್ತಿಗಳಿಗೆ ಹಾನಿಯಾದಲ್ಲಿ ಕಟ್ಟಡದ ಮಾಲೀಕರೇ ಜವಾಬ್ದಾರರು.

18. ಕಟ್ಟಡದ ಶೌಚಾಲಯದ ಹೊಂಡವನ್ನು ಸುತ್ತಲಿನ ಬಾವಿಯಿಂದ 18 ಮೀ. ಅಂತರದಲ್ಲಿ ನಿರ್ಮಿಸತಕ್ಕದ್ದು.

19. ಕಟ್ಟಡದ ಘನತ್ಯಾಜ್ಯವನ್ನು ಕಟ್ಟಡದ ಮಾಲೀಕರು ಸ್ವಂತ ವೆಚ್ಚದಲ್ಲಿ ವಿಲೇಗೆ ವ್ಯವಸ್ಥೆ ಕಲ್ಪಿಸತಕ್ಕದ್ದು.

20. ಕಟ್ಟಡದ ಶೌಚಾಲಯದ ತ್ಯಾಜ್ಯವನ್ನು ಈ ಕಛೇರಿಯ ಪೂರ್ವಾನುಮತಿ ಪಡೆದು ಒಳಚರಂಡಿಗೆ ಸಂಪರ್ಕಿಸತಕ್ಕದ್ದು.

21. ಈ ಪರವಾನಿಗೆಯನ್ನು ಕಟ್ಟಡಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ಮಾತ್ರ ಪರಿಗಣಿಸುವುದು.

22. ಅನುಮೋದಿತ ನಕ್ಷೆಯ ಪ್ರತಿಯನ್ನು 3 ಅಡಿ ಅಗಲ X 2 ಅಡಿ ಅಗಲ ಎತ್ತರದ ಫಲಕ ಸಿದ್ಧಪಡಿಸಿ ಕಟ್ಟಡದ ಕಾಮಗಾರಿ ಪ್ರಾರಂಭದಿಂದ ಪೂರ್ಣಗೊಳ್ಳುವ ಸಂಪೂರ್ಣ ಅವಧಿಗೆ ಕಟ್ಟಡದ ಮುಂಭಾಗದಲ್ಲಿ ಕಡ್ಡಾಯವಾಗಿ ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸತಕ್ಕದ್ದು.

23. ಆದೇಶವನ್ನು ಉಲ್ಲಂಘಿಸಿದಲ್ಲಿ ಕಟ್ಟಡದ ಕಾಮಗಾರಿಯನ್ನು ಮುಂದಿನ ಆದೇಶದವರೆಗೆ ನಿಲ್ಲಿಸಲಾಗುವುದು.

**ಪರವಾನಿಗೆ ಅವಧಿ ದಿನಾಂಕ : 08-02-2019 ರಿಂದ 07-02-2020 ರವರೆಗೆ ಮಾತ್ರ ಅನ್ವಯಿಸುತ್ತದೆ.**

**ಮುಖ್ಯಾಧಿಕಾರಿ,**
**ಪುರಸಭೆ,ದೇವನಹಳ್ಳಿ**

ರವರಿಗೆ,
ಶ್ರೀಮತಿ/ಶ್ರೀ. ಶ್ರೀ ಜೆ ಚಂಗಮನಾಯ್ಡು ಬಿನ್ ಲೇಟ್ ಜೆ ರಾಮಾನಾಯ್ಡು,
ಶ್ರೀ ಜೆ ಚಂಗಮನಾಯ್ಡು ಬಿನ್ ಲೇಟ್ ಜೆ ರಾಮಾನಾಯ್ಡು ನಂ.287/ಬಿ 9ನೇ ಎ ಕ್ರಾಸ್ 40 ನೇ ಅಡ್ಡ ರಸ್ತೆ 2ನೇ ಬ್ಲಾಕ್,
ಜಯನಗರ - 560041